**ಓ.ಎಸ್.ನಂ. 93/2021 ಪಿ.ಡಬ್ಲ್ಯೂಃ 1**

ದಿನಾಂಕಃ **29.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ **ಬೋಧಿಸಲಾಯಿತು.**

<u>ಮುಂದುವರೆದ ಪಾಟೀ ಸವಾಲು :</u> ಪ್ರತಿವಾದಿಗಳ ಪರ ಶ್ರೀ ಎಸ್.ಎಚ್.ಸಿ. ವಕೀಲರಿಂದಃ

05. ನಾನು ಹೇಳಿದ ಬಸಪ್ಪ ಸುಮಾರು 6-7 ತಿಂಗಳ ಹಿಂದೆ ಮೃತಪಟ್ಟಿದ್ದಾರೆ. ಅವರು ಮೃತಪಡುವ 6-7 ತಿಂಗಳ ಹಿಂದಿನವರೆಗೂ ಸದರಿ ಬಸಪ್ಪ ಈ ದಾವೆಯ ಬಗ್ಗೆ ಮಾಹಿತಿ ಕೊಡಲು ಬಂದು-ಹೋಗುವುದನ್ನು ಮಾಡುತ್ತಿದ್ದರು ಎಂದರೆ ಸರಿ. ಸದರಿ ಬಸಪ್ಪ ಈ ದಾವೆಯನ್ನು ತಯಾರಿಸಲು ಮಾಹಿತಿ ಕೊಡುವುದು ಮತ್ತು ದಾಖಲೆಗಳನ್ನು ಸಂಗ್ರಹಿಸಿ ಕೊಡುವುದು ಎಲ್ಲವನ್ನೂ ಮಾಡುತ್ತಿದ್ದರು ಎಂದರೆ ಇಲ್ಲ, ಅದನ್ನು ನಾನು ಮತ್ತು ನನ್ನ ಅಣ್ಣ ಮಾಡಿದ್ದೇವೆ. ದಾವಾ ಸ್ವತ್ತಿಗೆ ನಾವು ಯಾವಾಗ ಹೋಗಿದ್ದೆವು? ಎಂದರೆ ಅಪ್ಪ-ಅಮ್ಮ ಇರುವಾಗ ಹೋಗಿ ಬರುತ್ತಿದ್ದೆವು. ನಾನು ನನ್ನ ತಂದೆ ಎಂದು ಹೇಳುತ್ತಿರುವ ದಿಳ್ಳಪ್ಪನಿಗೆ ಮದುವೆಯೇ ಆಗಿರಲಿಲ್ಲ ಎಂದರೆ ಸರಿಯಲ್ಲ. ದಿಳ್ಳಪ್ಪನ ಜೀವಿತಾವಧಿಯಲ್ಲಿ ಗಂಗಮ್ಮನ ಸರ್ವೇ ನಂ. 50/ಸಿ ಯಲ್ಲಿ 3 ಎಕರೆ ಜಮೀನನ್ನು ದಿಳ್ಳಪ್ಪನ ಹೆಸರಿಗೆ ಕೊಡಲಾಗಿತ್ತು ಎಂದರೆ ಸರಿಯಲ್ಲ. ದಿಳ್ಳಪ್ಪ ತನಗೆ ಬಂದಿದ್ದ 3 ಎಕರೆ ಜಮೀನನ್ನು ನಡುವಿನಹಳ್ಳಿಯ ಶಿವಮೂರ್ತೆಪ್ಪನಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂ. 50/1 ಮತ್ತು 50/2ರಲ್ಲಿ ತಲಾ ಎರಡೂವರೆ ಎಕರೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಬಂದಿದ್ದವು ಎಂದರೆ ಅವರೇ ಮಾಡಿಕೊಂಡಿದ್ದಾರೆ. ನನಗೆ ಐಟಂ ನಂ. 2 ರ ಚೆಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಐಟಂ ನಂ.3 ಈಗ ಕೊಟ್ರಪ್ಪನ ಹಿಸ್ಸೆಗೆ ಬಂದಿದೆ ಎಂದರೆ ಅವರು ಮಾಡಿಕೊಂಡಿದ್ದಾರೆ. ನಾನು ದಾವಾ ಜಮೀನುಗಳನ್ನು ನೋಡಿಯೂ ಇಲ್ಲ ಮತ್ತು ಅವುಗಳಿಗೆ ಹೋಗೂ ಇಲ್ಲ ಎಂದರೆ ನೋಡಿದ್ದೇನೆ. ವಾದ ಪತ್ರದಲ್ಲಿ ಜಂಟಿ ಸಾಗುವಳಿ ಮಾಡುತ್ತಿರುವುದಾಗಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಿಳ್ಳಪ್ಪನಿಗೆ ಈಗಾಗಲೇ ಹಿಸ್ಸೆ ಬಂದಿರುವ ಕಾರಣ ನಮಗೆ ಹಿಸ್ಸೆ ಇದೆ ಎಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಏನೇನು ಬರೆದಿದೆ ಎಂಬ ಬಗ್ಗೆ ನನಗೆ ಗೊತ್ತಿದೆಯೇ ? ಎಂದರೆ ನನಗೆ ಓದಲು ಬರುವುದಿಲ್ಲ. ನನಗೆ ಕನ್ನಡ ಹಾಗೂ ಇಂಗ್ಲೀಷ್ ಓದಲಿಕ್ಕೆ ಬರುವುದಿಲ್ಲ. ವಾದ ಪತ್ರವನ್ನು ಇಂಗ್ಲೀಷ್‌ನಲ್ಲಿ ಬರೆಯಲಾಗಿದೆ . ವಕೀಲರು ಇಂಗ್ಲೀಷ್ ನಲ್ಲಿರುವ ವಾದ ಪತ್ರವನ್ನು ನನಗೆ ಓದಿ ಹೇಳಿದ್ದಾರೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೇನು ಬರೆದಿದೆ ಎಂದು ನನಗೆ ಗೊತ್ತಿದೆ . ನಾನು ಸುಳ್ಳು ವಿವರಗಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
**ಹೂವಿನ ಹಡಗಲಿ.**